ಓ ಎಸ್ ನಂ. 103/2025

ಪಿ.ಡಬ್ಲು-1

ಸುಹಾಸಿನಿ ತಂದೆಃ ಮಡಿವಾಳಪ್ಪ ಬೋರಗಿ

**ಇಂದು ದಿನಾಂಕಃ25-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ ಎಮ್ ಸಿ ವಕೀಲರಿಂದ.**

ನನ್ನ ತಾಯಿಯ ಹೆಸರು ಕಸ್ತೂರಿ ಬಾಯಿ ಇರುತ್ತದೆ. ನನ್ನ ಜನ್ಮ ದಿನಾಂಕಃ 20-06-2000 ಇರುತ್ತದೆ. ನನ್ನ ಜನ್ನ ದಿನಾಂಕವನ್ನು ತೋರಿಸಲು ನಾನು ಜನನ ಪ್ರಮಾಣ ಪತ್ರ ಹಾಜರ್ ಪಡಿಸಿರುವುದಿಲ್ಲ. ಸಾಕ್ಷಿ ವರ್ಗಾವಣೆ ಪ್ರಮಾಣ ಪತ್ರ ಮತ್ತು ಅಂಕಪಟ್ಟಿ ನೀಡಿರುತ್ತೇನೆ ಎನ್ನುತ್ತಾರೆ. ನಾನು ಚುನಾವಣಾ ಗುರುತಿನ ಚೀಟಿಯನ್ನು ಹಾಜರ್ ಪಡಿಸಿರುವುದಿಲ್ಲ. ನಾನು ಸರ್ಕಾರಿ ಶಾಲೆಯ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರ್ ಪಡಿಸಿರುತ್ತೇನೆ. ನಾನು ಸದರಿ ಶಾಲೆಯಲ್ಲಿ 9 ಮತ್ತು 10ನೇ ತರಗತಿಯನ್ನು ಓದಿರುತ್ತೇನೆ. ನಾನು ಅದಕ್ಕೂ ಮೊದಲು ಖಾಸಗಿ ಶಾಲೆಯಲ್ಲಿ ಓದಿರುತ್ತೇನೆ. ನಾನು ಸದರಿ ಖಾಸಗಿ ಶಾಲೆಯ ದಾಖಲೆಗಳನ್ನು ಹಾಜರ್ ಪಡಿಸಿರುವುದಿಲ್ಲ. ನಾನು ಖಾಸಗಿ ಶಾಲೆ ಮತ್ತು ಸರ್ಕಾರಿ ಶಾಲೆಯಲ್ಲಿ ಪ್ರವೇಶ ಪಡೆದ ದಾಖಲೆಗಳನ್ನು ಹಾಜರ್ ಪಡಿಸಿರುವುದಿಲ್ಲ. ಸದರಿ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಮಡಿವಾಳಪ್ಪ ಎಂದು ನಮೂದು ಇರದ ಕಾರಣ ನಾನು ಸದರಿ ದಾಖಲೆಗಳನ್ನು ಹಾಜರ್ ಪಡಿಸಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿ ಬೇಕಾದರೆ ಅವುಗಳನ್ನು ತಂದು ಹಾಜರ್ ಪಡಿಸುತ್ತೇನೆ ಎನ್ನುತ್ತಾರೆ. ನಾನು ಹಾಜರ್ ಪಡಿಸಿದ ದಾಖಲೆನ್ನು ನಾನು ತಂದೆಯ ಹೆಸರು ತಿದ್ದುಪಡಿ ಮಾಡಿಕೊಂಡು ಹಾಜರ್ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ನನ್ನ ತಾಯಿ ಕಸ್ತೂರಿಬಾಯಿರವರು ಮಡಿವಾಳಪ್ಪರವರ 2ನೇ ಹೆಂಡತಿಯಾಗಿರುತ್ತಾರೆ. ನಾವು ಜೈನ್ ಸಮುಧಾಯ ಹೊಂದಿರುತ್ತೇವೆ. ಜೈನ್ ಸಮುಧಾಯದಲ್ಲಿ ಎರಡು ಮದುವೆ ಆಗುವ ಸಂಪ್ರದಾಯ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ-ತಾಯಿ ಒಪ್ಪಿಗೆ ಮೇರೆಗೆ ಅವರು 2ನೇ ಮದುವೆ ಆಗಿರುತ್ತಾರೆ. 2ನೇ ಮದುವೆ ಆಗಲು 1ನೇ ಪ್ರತಿವಾದಿ ಬೌರಮ್ಮರವರು ಯಾವುದೇ ಸಮ್ಮತಿ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಡಿವಾಳಪ್ಪ ಮತ್ತು ಕಸ್ತೂರಿಬಾಯಿರವರ ಮದುವೆ ಊರಲ್ಲಿ ಆಗಿರುತ್ತದೆ ಎಂದು ಹೇಳಿರುತ್ತಾರೆ, ಅದರ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಮದುವೆ ಸಮಯದಲ್ಲಿ ನನ್ನ ತಂದಯ ತಾಯಿ ಮತ್ತು ಅವರ ಸಹೋದರರು ಇದ್ದ ಬಗ್ಗೆ ಗೊತ್ತು.

ನನ್ನ ತಾಯಿಯ ಮದುವೆಯ ಫೋಟೋಗಳು ಇರುವುದಿಲ್ಲ. ನನ್ನ ತಂದೆಯ ಸಹೋದರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

3. 1ನೇ ಪ್ರತಿವಾದಿ ಬೌರಮ್ಮರವರು ಮಾತ್ರ ಮಡಿವಾಳಪ್ಪರವರ ಹೆಂಡತಿ ಇದ್ದು, ನನಗೂ ಮತ್ತು ಮಡಿವಾಳಪ್ಪರವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು 1ನೇ ಪ್ರತಿವಾದಿ ಬೌರಮ್ಮರವರು ಬೇರೆ ಬೇರೆ ಮನೆಯಲ್ಲಿ ವಾಸ ಇದ್ದರು. ನಮ್ಮ ದೊಡ್ಡಪ್ಪರವರು ಶುಭ ಕಾರ್ಯಗಳಿಗೆ ಮತ್ತು ಮನೆಯಲ್ಲಿ ಕೆಟ್ಟದ್ದು ಆದಾಗ ನಮ್ಮನ್ನು ಕರೆಯುತ್ತಿದ್ದರು. 2 ರಿಂದ 4ನೇ ಪ್ರತಿವಾದಿಗಳು ನನ್ನ ಸಹೋದರರು ಮತ್ತು ಸಹೋದರಿಯರು ಆಗಿರುತ್ತಾರೆ. ಅವರ ಜನ್ಮ ದಿನಾಂಕಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು 1 ರಿಂದ 4ನೇ ಪ್ರತಿವಾದಿಗಳು ಸೇರಿ ಇದ್ದ ಪೊಟೋಗಳು ಇರುವುದಿಲ್ಲ. ನನಗು ಮತ್ತು ಅವರಿಗೂ ಸಂಬಂಧ ಇರದ ಕಾರಣ ನಾವು ಸೇರಿ ಇದ್ದ ಯಾವುದೇ ಫೋಟೋಗಳು ಇಲ್ಲ ಎಂದರೆ ಸರಿಯಲ್ಲ.

4. ದಾವಾ ಜಮೀನು ಒಟ್ಟು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ 1ನೇ ಪ್ರತಿವಾದಿಗೆ 2 ಎಕರೆ 30 ಗುಂಟೆ ಬಂದಿದೆ ಎನ್ನುತ್ತಾರೆ. 1ನೇ ಪ್ರತಿವಾದಿ ಪಾಲಿಗೆ ಸದರಿ ಜಮೀನು ಬಂದಿದೆ ಎಂದರೆ ಸಾಕ್ಷಿ ಕೇವಲ ಮಾತುಕತೆ ಮಾಡಿ ಅವರ ಹೆಸರಿಗೆ ಇದೆ ಎನ್ನುತ್ತಾರೆ. ನನ್ನ ವಾದ ಪತ್ರದಲ್ಲಿ ಒಂದು ಕಡೆ 2 ಎಕರೆ30 ಗುಂಟೆ ಮತ್ತು ಮತ್ತೊಂದು 6 ಎಕರೆ 26 ಗುಂಟೆ ಜಮೀನು ತೋರಿಸಿರುತ್ತೇನೆ ಎಂದರೆ ಸಾಕ್ಷಿ 1ನೇ ಪ್ರತಿವಾದಿಗೆ 2 ಎಕರೆ 30 ಗುಂಟೆ ಜಮೀನು ತೆಗೆದುಕೋ ಎಂದು ಹೇಳಿರುತ್ತಾರೆ ಅದರ ಕುರಿತು ನಾನು ಕೇಳಿರುತ್ತೆನೆ ನಾನು ಪಾಲು ಕೇಳಿರುತ್ತೇನೆ ಎನ್ನುತ್ತಾರೆ. ನಾನು ವಾದ ಪತ್ರದಲ್ಲಿ ತಿಳಿಸಿದಂತೆ 1ನೇ ಪ್ರತಿವಾದಿ ನಮಗೆ ಬೆಳೆ ಮತ್ತು ಹಣವನ್ನು ನೀಡಿರುವುದಿಲ್ಲ.

((ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು. ))

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.